# ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)

ಆತ್ಮೀಯ CCC 1 ಕಾರ್ಮಿಕರೇ,

ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸಿ

- *2012 ರ ಆಗಸ್ಟ್‌ನಲ್ಲಿ CCC 1 ಕಂಪನಿಯನ್ನು ಮುಚ್ಚಲು ಹೊರಟವರು ಯಾರು?*
- *ವೇರ್‌ವೆಲ್‌ಕಂಪನಿಯನ್ನು ಕಾರ್ಮಿಕರಿಗೂ ಗೊತ್ತಿಲ್ಲದಂತೆ ಮುಚ್ಚಿ ಅ ಕಾರ್ಮಿಕರನ್ನು ಬಲವಂತವಾಗಿ ವರ್ಗಾಯಿಸಿದ್ದು ಯಾರು? ಆ ಕಾರ್ಮಿಕರು ಇಂದಿಗೂ ಪಿ.ಎಫ್ ತೆಗೆದುಕೊಳ್ಳಲು ಅಲೆಯುತ್ತಿರುವುದಕ್ಕೆ ಕಾರಣ ಯಾರು?*
- *ಹೆಚ್ಚಿನ ಮುಸ್ಲಿಂ ಕಾರ್ಮಿಕರು ಇದ್ದರೂ, ಅವರಿಗೆ ಕಾನೂನು ಬದ್ಧವಾಗಿ ರಂಜಾನ್ ಪ್ರಾರ್ಥನೆ ಮಾಡಲು ಸೂಕ್ತ ಸ್ಥಳ ಕೊಡದೆ ನಾಯಿಗಳು ವಾಸಿಸುವ ಸ್ಥಳವನ್ನು ಕೊಟ್ಟದ್ದು ಯಾರು?*
- *ರಂಜಾನ್ ಹಬ್ಬಕ್ಕೆ ರಜೆಕೊಡದೆ, ರಜೆತೆಗೆದುಕೊಂಡ ಮುಸ್ಲಿಂ ಕಾರ್ಮಿಕರಿಗೆ ಕಾಂಪ್‌ಆಫ್ ಮಾಡಿಸುತ್ತಿದ್ದವರು ಯಾರು?*
- *ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ಹುನ್ನಾರ ಮಾಡಿ, ಇದ್ದಕ್ಕಿದ್ದಂತೆ ಬಸ್ ಸೌಲಭ್ಯವನ್ನು ನಿಲ್ಲಿಸಿದ್ದು- ಯಾರು?*
- *ಮಹಿಳಾ ಕಾರ್ಮಿಕರನ್ನು ಬಾಯಿ ಬಂದ ಹಾಗೆ ತುಚ್ಚವಾಗಿ ಬೈಯುತ್ತಿರುವುದು ಯಾರು?*
- *ಸಣ್ಣ ಪುಟ್ಟ ತಪ್ಪುಗಳಿಗೂ ಕಾನೂನು ಬಾಹಿರವಾಗಿ ಕಾರ್ಮಿರನ್ನು ಕೆಲಸದಿಂದ ತೆಗೆದುಹಾಕುತ್ತಿರುವುದು ಯಾರು?*
- *ಇಲ್ಲಿಯವರೆಗೂ ಎಷ್ಟು ಜನ ಕೆಲಸ ಕಳೆದುಕೊಂಡಿದ್ದಾರೆ?*

ಈ ಪ್ರಶ್ನೆಗಳೆಲ್ಲದಕ್ಕೂ ಒಂದೇ ಉತ್ತರ ಅದು CCC 1 ಆಡಳಿತವರ್ಗ. ಈ ಆಡಳಿತ ವರ್ಗವು ಹಲವಾರು ರೀತಿಯಲ್ಲಿ ತನ್ನ ಕಾರ್ಮಿಕರಿಗೆ ಮಾನಸಿಕ, ದೈಹಿಕ ಕಿರುಕುಳವನ್ನು ಕೊಡುತ್ತಿದೆ.

ಆದರೆ ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಲು ಈ ಎಲ್ಲದರ ವಿರುದ್ಧ ಹೋರಾಡುತ್ತಿರುವುದು GATWU. ಕಂಪನಿ ಇಂದಿಗೂ ಕೆಲಸ ಮಾಡುವಂತೆ ಮಾಡಿ, ಮುಸ್ಲಿಂ ಕಾರ್ಮಿಕರಿಗೆ ಪ್ರಾರ್ಥನೆ ಮಾಡಲು ಸೂಕ್ತ ಜಾಗ ಕೊಡಿಸಿ, ರಂಜಾನ್ ಹಬ್ಬಕ್ಕೆ ರಜೆ ಕೊಡಿಸಿ ಕಾರ್ಮಿಕರ ಪರವಾಗಿ ಹೋರಾಡುತ್ತಿರುವುದು GATWU. ಮಹಿಳಾ ಕಾರ್ಮಿಕರನ್ನು ತುಚ್ಚವಾಗಿ ಬೈಯದಂತೆ, ಯಾವ ಕಾರ್ಮಿಕರನ್ನೂ ಕೆಲಸದಿಂದ ತೆಗೆದುಹಾಕದಂತೆ ಕಾನೂನು ಪ್ರಕಾರ ಹೋರಾಟ ನಡೆಸುತ್ತಿರುವುದು GATWU.

ಆದ್ದರಿಂದ ಕಾರ್ಮಿಕರೇ, ನಿಮ್ಮ ಪರವಾಗಿ ಇರುವವರು ಯಾರು? ನಿಮ್ಮನ್ನು ಶೋಷಿಸುತ್ತಿರುವವರ ಯಾರು ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಿ, ಕಾರ್ಮಿಕರ ಶಕ್ತಿಯ ಮೇಲೆ ನಂಬಿಕೆ ಇಡಿ. ನಿಮಗೋಸ್ಕರ ಹೋರಾಡುತ್ತಿರುವ,ನಿಮಗಾಗಿ ಇರುವ GATWU ಅನ್ನು ಬೆಂಬಲಿಸಿ. ಯೂನಿಯನ್ ಸೇರುವುದು ನಿಮ್ಮ ಸಂವಿಧಾನ ಬದ್ಧ ಹಕ್ಕು. ಇದನ್ನುಯಾರೂ ಸಹ ಪ್ರಶ್ನಿಸುವಂತಿಲ್ಲ.

*ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:* GATWU, *ನಂ*.17/1, *ಹೊಸಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು, ಮೊ:* 9686229761, 9901290495

Scanned with OKEN Scanner